# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.265/25** **ಪಿ . ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ರಾಮು<br>ನಂಜನಗೂಡು |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ** 07 -03 -2026. |

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಹೆಚ್ ಪಿ ಎಸ್ ವಕೀಲರಿಂದಃ**

ನಿಮ್ಮ ತಂದೆಯವರಿಗೆ ಕ್ರಯದ ಕರಾರಿನ ಮೂಲಕ ಸದರಿ ಆಸ್ತಿಯು ಬಂದಿರುತ್ತದೆ ಎಂದು ಹೇಳಿರುವಿರಾ ಅದರೆ ನೀವು ನಿಮ್ಮ ತಂದೆಯವರಿಗೆ ಮಾರಾಟ ಮಾಡಿದ ವ್ಯಕ್ತಿಗೆ ಹೇಗೆ ಬಂದಿರುತ್ತದೆ ಎಂದು ತೋರಿಸಲು ನೀವು ಯಾವುದಾದರೂ ದಾಖಲೆಗಳನ್ನು ಹಾಜರುಪಡಿಸಿರುವಿರಾ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ದಾವೆಯಲ್ಲಿ ಕಟ್ಟಿರುವ ಮನೆಯನ್ನು ಹೊಡೆದು ಹಾಕಿ ಖಾಲಿ ಮಾಡಿಕೊಡಬೇಕು ಎಂದು ಹೇಳಿರುತ್ತಿರಾ ಎಂದರೆ ಸರಿ. ಕಟ್ಟಿದ ಮನೆಯ ಬೆಲೆ ಎಷ್ಟು ಎಂದು ತೋರಿಸಲು ನೀವು ಯಾವುದಾದರೂ ದಾಖಲೆಗಳನ್ನು ಹಾಜರುಪಡಿಸಿರುವಿರಾ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದು ನುಡಿಯುತ್ತಾರೆ.ನೀವು ನಿಮ್ಮ ವಾದ ಪತ್ರದಲ್ಲಿ ಸದರಿ ದಾವೆ ಯನ್ನು ಹೂಡಲು ತುರ್ತು ಏನು ಇತ್ತು ಎಂಬುದನ್ನು ನಮೂದು ಮಾಡಿರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ಅಕ್ರಮವಾಗಿ ಮನೆ ಕಟ್ಟಿರುವ ಕಾರಣದಿಂದ ನಾನು ಸದರಿ ದಾವೆಯನ್ನು ಹೂಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಮನೆ ಕಟ್ಟಿರುವ ಕಾರಣ ಏನು ನಷ್ಟ ಆಗಿರುತ್ತದೆ ಎಂಬುದನ್ನು ನೀವು ನಿಮ್ಮ ವಾದಪತ್ರದಲ್ಲಿ ನಮೂದು ಮಾಡಿರುವಿರಾ ಎಂಬ ಪ್ರಶ್ನೆಗೆ ಸಾಕ್ಷಿಯು ನಮಗೆ ನಷ್ಟ ಆಗಿರುತ್ತದೆ ಅದರೆ ನಷ್ಟ ಆಗಿದೆ ಎಂದು ನಾನು ನನ್ನ ವಾದಪತ್ರದಲ್ಲಿ ನಮೂದು

ಮಾಡಿರುವುದಿಲ್ಲ ಆದರೆ ಅದನ್ನು ನಾನು ಈಗ ಹೇಳುತ್ತಿದ್ದೇನೆ ಎಂದು ನುಡಿಯುತ್ತಾರೆ. ನಿಪಿ-1 ಸಿವಿಲ್ ವ್ಯಾಜ್ಯಕ್ಕಾಗಿ ಹೊರತು ಪಡಿಸಿ ಎಂದು ನಮೂದು ಆಗಿರುತ್ತದೆ ಎಂದರೆ ಸರಿ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**